ಈ) ಆಯವ್ಯಯದಲ್ಲಿ ಕಬಿನಿ ಯೋಜನೆಗೆ ನಿಗಧಿಪಡಿಸಲಾದ ಅನುದಾನದಲ್ಲಿ ಈ ಕಾಮಗಾರಿಗೆ ಅನುದಾನ ಒದಗಿಸಲಾಗುವುದು.

ಉ) ಈ ಯೋಜನೆಯ ಅಂದಾಜಿಗೆ ಮಂಜೂರಾತಿ ದೊರಕಿದ್ದು, ಟೆಂಡರ್ ಕರೆಯಲಾಗುತ್ತಿದೆ.

ಊ) ಈ ಯೋಜನೆಯನ್ನು 2001-02ನೇ ಸಾಲಿನಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಆಸುಂಡಿ ನಾಲಾ ಬಂದರು

812 - ಶ್ರೀ ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) : ಮಾನ್ಯ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಣೆಬೆನ್ನೂರು ತಾಲ್ಲೂಕಿನ ಆಸುಂಡಿ ನಾಲಾ ಬಂದರನ್ನು ಆಯವ್ಯಯದಲ್ಲಿ ಸೇರಿಸಲಾಗಿದೆಯೇ?*

ಆ) *ಹಾಗಿದ್ದಲ್ಲಿ ಈ ವರ್ಷ ಅದಕ್ಕೆ ಪೂರ್ಣ ಅನುದಾನ ಬಿಡುಗಡೆ ಮಾಡಿ ಪೂರ್ಣಗೊಳಿಸಲಾಗುವುದೇ?*

ಶ್ರೀ ಎಸ್. ಕುಮಾರ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) 0.01ರಷ್ಟು ಅನುದಾನದೊಂದಿಗೆ ಸೇರಿಸಲಾಗಿದೆ.

ಆ) ಈ ವರ್ಷ ಸಾಂಕೇತಿಕ ಅನುದಾನ (1 ಸಾವಿರ) ಇರುವುದರಿಂದ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ.

ಗಾಜನೂರ ಹತ್ತಿರ ಕಟ್ಟುತ್ತಿರುವ ಅಣೆಕಟ್ಟು

814 - ಶ್ರೀ ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಗಾಜನೂರ ಹತ್ತಿರ ಕಟ್ಟುತ್ತಿರುವ ಅಣೆಕಟ್ಟು ಯಾವ ಹಂತದಲ್ಲಿದೆ, ಅದರ ಯೋಜನಾ ವೆಚ್ಚವೆಷ್ಟು? ಎಂದು ಮುಗಿಯುತ್ತದೆ.*

ಆ) *ಹಾವೇರಿ ಜಿಲ್ಲೆಯಲ್ಲಿನ ಕಾಲುವೆಗಳ ಉದ್ದ ಅಳತೆ ಎಷ್ಟು?*

ಇ) *ಹಾವೇರಿ ಜಿಲ್ಲೆಯಲ್ಲಿ ಸುರಂಗ ಮಾರ್ಗವೆಷ್ಟು ಉದ್ದ ಅಳತೆ ಇದೆ ಅದನ್ನು ಎಂದು ಪ್ರಾರಂಭಿಸಲಾಗುತ್ತದೆ?*

ಈ) *ಈ ಯೋಜನೆಯನ್ನು ಪೂರ್ಣಗೊಳಿಸಿ ರೈತರ ಹೊಲಗಳಿಗೆ ನೀರು ಸರಬರಾಜು ಮಾಡುವುದು ಎಂದು?*

ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ತುಂಗಾ ಮೇಲ್ದಂಡೆ ಯೋಜನೆಯಡಿ ಯೋಜಿಸಿರುವ ಹೊಸ ಅಣೆಕಟ್ಟು ನಿರ್ಮಾಣ ಪ್ರಾರಂಭಿಸಿದ ಅಗೆತದ ಹಂತದಲ್ಲಿದೆ. ಹೊಸ ಅಣೆಕಟ್ಟೆಯ ಅಂದಾಜು ಮೊತ್ತ ರೂ. 9200 ಲಕ್ಷಗಳು. ಹೊಸ ಅಣೆಕಟ್ಟೆಯ ಕೆಲಸವನ್ನು ಫೆಬ್ರವರಿ-2002ರಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಆ) ಹಾವೇರಿ ಜಿಲ್ಲೆಯಲ್ಲಿನ ತುಂಗಾ ಮೇಲ್ದಂಡೆ ಯೋಜನೆಯ ಮುಖ್ಯ ಕಾಲುವೆಯ ಉದ್ದ 249.50 ಕಿ.ಮೀ.

ಇ) ಹಾವೇರಿ ಜಿಲ್ಲೆಯಲ್ಲಿನ ಸುರಂಗದ ಮಾರ್ಗದ ಉದ್ದ 3.90 ಕಿ.ಮೀ.

ಈ) ಈ ಯೋಜನೆಯನ್ನು 2002ರಲ್ಲಿ ಪೂರ್ಣಗೊಳಿಸಲು ಯೋಜಿಸಿದೆ.

ಬೈಲಹೊಂಗಲ ನಗರದಲ್ಲಿ ಉಪವಿಭಾಗಾಧಿಕಾರಿಗಳ ವಸತಿ ಗೃಹಕ್ಕೆ ಆಯವ್ಯಯದಲ್ಲಿ ಒದಗಿಸುವ ಮೊತ್ತ

807 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಉಪ ವಿಭಾಗಾಧಿಕಾರಿಗಳ ವಸತಿ ಗೃಹವನ್ನು ಕಟ್ಟುವ ಕೆಲಸವು ಈ ವರ್ಷದ ಆಯವ್ಯಯದಲ್ಲಿ ಸೇರಿದ ಸಂಗತಿ ನಿಜವೇ? ಹಾಗಿದ್ದಲ್ಲಿ ಈ ಕೆಲಸಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗುವುದು?

ಆ) ಲೋಕೋಪಯೋಗಿ ಇಲಾಖೆಯವರು ಈ ಮೊತ್ತಕ್ಕೆ ಅಂದಾಜು ವೆಚ್ಚ ತಯಾರಿಸಿ ಆಡಳಿತಾತ್ಮಕ ಮಂಜೂರಾತಿಗಾಗಿ ಕಂದಾಯ ಇಲಾಖೆಗೆ ಕಳುಹಿಸಿರುವುದು ನಿಜವೆ?

ಇ) ಲೋಕೋಪಯೋಗಿ ಇಲಾಖೆಯವರು ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡುವಲ್ಲಿ ವಿಳಂಬ ಮಾಡಿದ್ದರಿಂದ ಮಂಜೂರಾದ ಹಣ ಲ್ಯಾಪ್ಸ್ ಆಗುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಕಂದಾಯ ಇಲಾಖೆಯ ಅಧಿಕಾರಿಗಳು ಆಯವ್ಯಯದಲ್ಲಿ ತೋರಿಸಿದ ಪ್ರಕಾರ ಈ ಕೆಲಸಕ್ಕೆ ಕೂಡಲೇ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲು ಕ್ರಮ ಕೈಗೊಳ್ಳಲಾಗುವುದೇ?

ಉ) ಇದಕ್ಕೆ ತಾಂತ್ರಿಕ ಮಂಜೂರಾತಿಯನ್ನು ಸಹ ಪಡೆಯಲಾಗುವುದೆ?

ಶ್ರೀ ಧರಮ್‌ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಹೌದು. ಈ ಕೆಲಸಕ್ಕೆ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ರೂ. 5.00 ಲಕ್ಷಗಳ ಅನುದಾನ ಒದಗಿಸಲಾಗಿದೆ.